**ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ರವರ ನಡವಳಿಗಳು**

ವಿಷಯ: 2013–14ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಯೋಜನೆಯ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಕಾರ್ಯಕ್ರಮದಡಿ ಬಿಡುಗಡೆಯಾಗಿರುವ ಅನುದಾನವನ್ನು ಹಂಚಿಕೆ ಮಾಡುವ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 518 ಬಿಎಂಎಸ್ 2013 ದಿನಾಂಕ: 03.09.2013.
2. ಸರ್ಕಾರದ ಆದೇಶ ಸಂಖ್ಯೆ: ಹಿಂವಕ 589 ಬಿಎಂಎಸ್ 2013 ದಿನಾಂಕ: 05.10.2013.
3. ಸಕಾರದ ಆದೇಶ ಸಂಖ್ಯೆ: ಹಿಂವಕ 377 ಬಿಎಂಎಸ್ 2013 ಬೆಂಗಳೂರು ದಿನಾಂಕ: 14.08.2013.
4. ಸಕಾರದ ಆದೇಶ ಸಂಖ್ಯೆ: ಹಿಂವಕ 377 ಬಿಎಂಎಸ್ 2013 ಬೆಂಗಳೂರು ದಿನಾಂಕ: 27.12.2013.
5. ಹಿಂ.ವ.ಕ 752 ಬಿಎಮ್ಎಸ್ 2013 ದಿನಾಂಕ: 01–03–2014
6. ಸಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 516/ಬಿಎಂಎಸ್ 2013 ಬೆಂಗಳೂರು ದಿನಾಂಕ:12–11–2013 ಮತ್ತು ತಿದ್ದುಪಡಿ ಆದೇಶ ದಿನಾಂಕ: 06–12–2013

***

**ಪ್ರಸ್ತಾವನೆ:**

ರಾಜ್ಯ ಸರ್ಕಾರವು ಉಲ್ಲೇಖ (1) ರ ಸರ್ಕಾರದ ಆದೇಶದಲ್ಲಿ ರಾಜ್ಯದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದೊಂದಿಗೆ ಅಲೈನ್ ಮಾಡಿ ಅನುಷ್ಠಾನಗೊಳಿಸತಕ್ಕದೆಂದು ಆದೇಶಿಸಿರುತ್ತದೆ.

ಉಲ್ಲೇಖ (2) ರ ಸರ್ಕಾರದ ಆದೇಶದಲ್ಲಿ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ 'ಶುಲ್ಕ ವಿನಾಯಿತಿ' ಪರಿಷ್ಕೃತ ಕಾರ್ಯಕ್ರಮ ಮತ್ತು ಇದರ ಅನುಷ್ಠಾನದ ಕುರಿತು ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ

ಉಲ್ಲೇಖ (3) ರ ಸರ್ಕಾರದ ಆದೇಶದಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಡಿ ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಮಂಜೂರಾತಿಗಾಗಿ ಲೆಕ್ಕ ಲೆಕ್ಕಶೀರ್ಷಿಕೆ 2225-03-277-2-51 ರಡಿ 2ನೇ ಕಂತಿನ ಅನುದಾನದಲ್ಲಿ ರೂ.4353.00 ಲಕ್ಷ (ನಾಲ್ಕು ಸಾವಿರದ ಮೂನ್ನೂರ ಐವತ್ಮೂರು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು, ಉಲ್ಲೇಖ (4) ರ ಸರ್ಕಾರ ಆದೇಶ ದಿನಾಂಕ: 27.12.2013 ರಲ್ಲಿ ರೂ. 2177.00 ಲಕ್ಷಗಳನ್ನು ಹಾಗೂ ಉಲ್ಲೇಖ (5) ರ ಆದೇಶದಲ್ಲಿ ರೂ. 2176.41 ಲಕ್ಷಗಳನ್ನು, ಒಟ್ಟಾರೆ ರೂ. 8706.41 ಲಕ್ಷಗಳನ್ನು (ರೂಪಾಯಿ ಎಂಟು ಸಾವಿರದ ಏಳುನೂರ ಆರು ಲಕ್ಷಗಳು ನಲವತ್ತೊಂದು ಸಾವಿರಗಳು ಮಾತ್ರ) ಆಯುಕ್ತರು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬೆಂಗಳೂರು, ಇವರಿಗೆ ಬಿಡುಗಡೆ ಮಾಡಲಾಗಿರುತ್ತದೆ.

2013-14ನೇ ಸಾಲಿನಲ್ಲಿ ಬಿಡುಗಡೆಯಾಗಿರುವ ಅನುದಾನದಲ್ಲಿ ರೂ.1419.06 ಲಕ್ಷಗಳ ಬದ್ಧತಾ ವೆಚ್ಚ(committed liability) ಮೊತ್ತದಲ್ಲಿ ಶೇಕಡ 2 ರಂತೆ ರೂ. 28.38 ಲಕ್ಷಗಳನ್ನು, ಉಲ್ಲೇಖ (6) ರ ಆದೇಶದನ್ವಯ ಪ್ರಚಾರ/ಆಡಳಿತ ವೆಚ್ಚಕ್ಕಾಗಿ ಕೇಂದ್ರ ಕಛೇರಿಯಲ್ಲಿ ವಿನಿಯೋಗಿಸಲು ಕಾಯ್ದಿರಿಸಿಕೊಂಡು ಉಲ್ಲೇಖ (2) ರ ಸರ್ಕಾರದ ಆದೇಶದನ್ವಯ ರೂ.1.00 ಲಕ್ಷ ವಾರ್ಷಿಕ ಆದಾಯದ ಮಿತಿಯೊಳಗೆ ಬರುವ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರ್ಪಡೆಯಾಗಿದ್ದು, ಮೆಟ್ರಿಕ್ ನಂತರದ ಗ್ರೂಪ್-ಎ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ಅರ್ಹ ವಿದ್ಯಾರ್ಥಿಗಳಿಗೆ ಕೇಂದ್ರ ಪುರಸ್ಕೃತ ಯೋಜನೆಯಾದ ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಯೋಜನೆಯಡಿ ಶುಲ್ಕ ವಿನಾಯಿತಿಯನ್ನು ಮಂಜೂರು ಮಾಡಲು ಹಾಗೂ ಉಲ್ಲೇಖ (1) ರ ಆದೇಶದನ್ವಯ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ (ಡೇ ಸ್ಕಾಲರ್) ಕಾರ್ಯಕ್ರಮದ ಅನುಷ್ಠಾನಕ್ಕಾಗಿ ವಿನಿಯೋಗಿಸಲು ಹಂಚಿಕೆ ಮಾಡಲು ಉದ್ದೇಶಿಸಿದ್ದು ಅದರಂತೆ ಈ ಆದೇಶ

<u>ಸಂಖ್ಯೆ:ಹಿಂವಕಇ/ವಿವೇ/ಸಿಆರ್-20/2013-14</u> <u>ದಿನಾಂಕ: 04.03.2014</u>

## <u>ಆದೇಶ</u>

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, 2013-14ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಯೋಜನೆ ಲೆಕ್ಕ ಶೀರ್ಷಿಕೆ 2225-03-277-2-51 ಅಬ್ಜೆಕ್ಟಿವ್ ಕೋಡ್ 059 ರಾಜ್ಯವಲಯ ಯೋಜನೆಯಡಿ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನವನ್ನು ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮಂಜೂರಾತಿ ಮಾಡಲು ಸರ್ಕಾರದಿಂದ ಬಿಡುಗಡೆಯಾದ ಅನುದಾನ ರೂ. 8706.41 ಲಕ್ಷ (ರೂಪಾಯಿ ಎಂಟು ಸಾವಿರದ ಏಳುನೂರ ಆರು ಲಕ್ಷ ನಲವತ್ತೊಂದು ಸಾವಿರಗಳು ಮಾತ್ರ) ಗಳನ್ನು ಕೆಳಕಂಡಂತೆ ಹಂಚಿಕೆ ಮಾಡಿ ಆದೇಶಿಸಿದೆ.

| ಕ್ರ. ಸಂ. | ವಿವರ | ಮೊತ್ತ (ರೂ. ಲಕ್ಷಗಳಲ್ಲಿ) | ಹಂಚಿಕೆ ಮಾಡಲಾದ ವಿವರ. |
|---|---|---|---|
| 1 | ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಡೇ ಸ್ಕಾಲರ್ ವಿದ್ಯಾರ್ಥಿಗಳಿಗೆ ಪರಿಷ್ಕೃತ "ಮೆಟ್ರಿಕ್-ನಂತರದ ವಿದ್ಯಾರ್ಥಿ ವೇತನ" ಮಂಜೂರಾತಿಗಾಗಿ. | 2885.88 | ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ ಇವರುಗಳಿಗೆ ಮರುಬಿಡುಗಡೆ ಮಾಡುವುದು. |
| 2 | ಕೇಂದ್ರ ಪುರಸ್ಕೃತ ಯೋಜನೆಯಡಿ ಹಿಂದುಳಿದ ವರ್ಗಗಳ ಗ್ರೂಪ್-ಎ ಕೋರ್ಸಿನ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಪರಿಷ್ಕೃತ "ಶುಲ್ಕ ವಿನಾಯಿತಿ" ಮಂಜೂರಾತಿಗಾಗಿ. | 5792.15 | ಆಯುಕ್ತರ ಕಛೇರಿ ಬೆಂಗಳೂರು |
| 3 | ಮೆಟ್ರಿಕ್-ನಂತರದ ವಿದ್ಯಾರ್ಥಿ ವೇತನ, ಊಟ ಮತ್ತು ವಸತಿ ಸಹಯೋಜನೆ ಹಾಗೂ ಶುಲ್ಕ ವಿನಾಯಿತಿಕಾರ್ಯಕ್ರಮದ ಆಡಳಿತಾತ್ಮಕ ವೆಚ್ಚಕ್ಕಾಗಿ | 28.38 | ಆಯುಕ್ತರ ಕಛೇರಿ ಬೆಂಗಳೂರು |
| | ಒಟ್ಟು | **8706.41** | |

(ಆರ್.ಶಾಂತರಾಜ್ ಭಾ.ಆ.ಸೇ)
ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು.

<u>ಪ್ರತಿಯನ್ನು ಈ ಕೆಳಕಂಡವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ:-</u>

1. ಮಹಾಲೇಖಪಾಲರು (ಆಡಿಟ್ ಮತ್ತು ಅಕೌಂಟ್ಸ್) ಕರ್ನಾಟಕ, ಬೆಂಗಳೂರು.
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
3. ಉಪ ನಿರ್ದೇಶಕರು, ನೆಟ್‌ವರ್ಕ್ಸ್ ಮ್ಯಾನೇಜ್‌ಮೆಂಟ್ ಸೆಂಟರ್ ನಂ.79, ಎರಡನೇ ಮಹಡಿ, ಖನಿಜ ಭವನ, ಸೌತ್ ಎಂಟ್ರೆನ್ಸ್, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
4. ರಾಜ್ಯದ ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.
5. ರಾಜ್ಯದ ಎಲ್ಲಾ ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿಗಳು
6. ಉಪ ನಿರ್ದೇಶಕರು, (ಸಮನ್ವಯ), ಕೇಂದ್ರ ಕಛೇರಿ, ಬೆಂಗಳೂರು.
7. ಲೆಕ್ಕಾಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು.
8. ಕಛೇರಿ ಪ್ರತಿ.